ಅಧ್ಯಾಯ : ೨

# ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

# ೨. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಉತ್ತಮ ಬರಹಗಳನ್ನು ಓದಿದಾಗ ಮನಕ್ಕೆ ನೆಮ್ಮದಿ, ಸನ್ನಡತೆ, ಸನ್ನುಡಿಗೆ ಪ್ರೇರಕವಾಗುತ್ತದೆಂಬದು ಸತ್ಯ ಸಂಗತಿ. ಸಾಹಿತ್ಯ ಮತ್ತು ವ್ಯಕ್ತಿತ್ವಕ್ಕೆ ಅವಿನಾಭಾವ ಸಂಬಂಧವಿದೆ. ವಿಭಿನ್ನ ವ್ಯಕ್ತಿತ್ವಗಳು ಸಾಹಿತ್ಯಕ್ಕೆ ವಸ್ತುಗಳಾದರೆ, ಸಾಹಿತ್ಯವು ಉತ್ತಮ ವ್ಯಕ್ತಿತ್ವದ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಕವಿಯ ಕೃತಿಗಳನ್ನು ಮಾತ್ರ ಅಧ್ಯಯನ ಮಾಡಿದರೆ, ಕೃತಿ ರಚನೆಗಿದ್ದ ಪ್ರಭಾವ, ಪ್ರೇರಣೆಗಳು ಮರೆಯಾಗಿ ಚಾರಿತ್ರಿಕ ಸತ್ಯಗಳು ಗೋಚರಿಸದೆ ಇರುವ ಸಾಧ್ಯತೆಗಳುಂಟು. ಹಾಗಾಗಿ ಕೃತಿಗಳ ಅಧ್ಯಯನದ ಜೊತೆಗೆ ಆ ಕವಿಯ ಜೀವನವನ್ನು ಅಧ್ಯಯನ ಮಾಡಿದಾಗ ಕೃತಿ ರಚನೆಯ ಸಂದರ್ಭದಲ್ಲಿನ ಒತ್ತಡಗಳು, ತುಡಿತಗಳು, ಸ್ಪಷ್ಟವಾಗಿ ಗೋಚರಿಸುತ್ತವೆ. ಕೃತಿಯ ಮೌಲ್ಯ ನಿರ್ಣಯಕ್ಕೆ ಒಂದು ಚೌಕಟ್ಟನ್ನು ಒದಗಿಸುತ್ತವೆ. ಕವಿಯ ಬದುಕು- ಬರಹಕ್ಕಿರುವ ಸಾಮ್ಯ-ವೈಷಮ್ಯಗಳೇನೆಂಬುದನ್ನು ಇಂತಹ ಅಧ್ಯಯನಗಳಿಂದ ತಿಳಿಯಬಹುದು. ಈ ತೆರನಾದ ಅಧ್ಯಯನ ಜೀವನ ಸಿದ್ಧಾಂತಗಳನ್ನು ಅರಿತು ಅನುಸರಿಸಲು; ಆದರ್ಶವೆಂದು ನಿರ್ಣಯಿಸಲು ಸಹಕಾರಿಯಾಗುತ್ತದೆ. ಈ ನಾಡಿನ ಕವಿಗಳ, ಕಲೆಗಾರರ ಬದುಕು- ಬರಹಗಳ ಅಧ್ಯಯನವು ಭವಿಷ್ಯದ ಬದುಕನ್ನು ಸಮಸ್ಯೆಗಳಿಂದ ಮುಕ್ತಗೊಳಿಸಿಕೊಂಡು ರೂಪಿಸಿಕೊಳ್ಳಲು ನೆರವಾಗಿವೆ.

ಬಯಸಿದಂತೆ ಬಾಳಲಿಲ್ಲವೆಂದು ಗೋಳಾಡುತ್ತೇವೆ, ಬಯಸದೇ ಭಾಗ್ಯವೇ ಬಂದಿತು ಎಂದು ಆಹ್ಲಾದಗೊಳ್ಳುತ್ತೇವೆ. ಇದು ಈ ಸೃಷಿಯ ವೈಚಿತ್ರ್ಯ. ಪ್ರಕೃತಿಯಲ್ಲಿ ಒಂದು ಕಡೆ ದಟ್ಟವಾದ ನೈಸರ್ಗಿಕ ಸಂಪತ್ತು; ಮತ್ತೊಂದೆಡೆ ಬಂಜರು ಭೂಮಿ ಇರುವಂತೆಯೇ ವ್ಯಕ್ತಿತ್ವಗಳಲ್ಲೂ ಈ ರೀತಿಯ ಭಿನ್ನತೆಯನ್ನು ಕಾಣುತ್ತೇವೆ. ಪ್ರಕೃತಿಯಲ್ಲಿನ ಆಕರ್ಷಣೆ ಮತ್ತು ಘರ್ಷಣೆಗಳೇ ಪ್ರತಿಭಾವಂತರ ಸಾಧನೆಗೆ ಸೋಪಾನಗಳಾಗಿವೆ. ಲೇಖಕ ತನ್ನ ಕೃತಿಯೊಳಗೆ ತಾನು ಬದುಕಿದ ಕಾಲದ ಜೀವನ ಧರ್ಮವನ್ನು ಹೇಗೆ ಅಳವಡಿಸಿಕೊಂಡಿದ್ದಾನೆಂಬುದರ ಅಧ್ಯಯನವು ಜೀವನ ಮೌಲ್ಯಗಳನ್ನು ಅರಿಯಲು ನೆರವಾಗುತ್ತದೆ. ಈ ನಿಟ್ಟಿನಲ್ಲಿ 'ಅಭಿನವಕಾಳಿದಾಸ' ಬಿರುದಿಗೆ ಪಾತ್ರರಾದ ಬಸವಪ್ಪಶಾಸ್ತ್ರಿಗಳ ಜೀವನ ಮತ್ತು ಕೃತಿಗಳ ಅಧ್ಯಯನದ ಅಗತ್ಯವಿದೆ. ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಸಂಸ್ಕೃತ ನಾಟಕಗಳ ಅನುವಾದದ ಸುಗ್ಗಿಯೇ ಆರಂಭವಾಯಿತು. ಇದರಲ್ಲಿ ಮೇಲ್ಪಂಕ್ತಿಯಾದವರು ಬಸವಪ್ಪಶಾಸ್ತ್ರಿ. ಇವರು ಕನ್ನಡದಲ್ಲಿ ನಾಟಕಗಳಿಲ್ಲವೆನ್ನುವ ಕೊರತೆಯನ್ನು ತುಂಬಿಕೊಟ್ಟವರಲ್ಲಿ ಪ್ರಮುಖರು. ಅದು ಹೇಗೆಂದು

ತಿಳಿಯುವ ಅಗತ್ಯವಿದೆ. ಈ ಅಧ್ಯಯನ ಆ ಕಾಲಘಟ್ಟದ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಲೋಕವನ್ನು ಪರಿಚಯಿಸುತ್ತದೆ. ಶಾಸ್ತ್ರಿಗಳ ಜೀವನದ ಮೇಲೆ ಬೆಳಕು ಬೀರುವುದರೊಂದಿಗೆ ಇಂದಿನ ಸಮಾಜದ ಸಮಸ್ಯೆಗಳ ನಿವಾರಣೆಗೂ ನೆರವಾಗುತ್ತದೆಂಬುದರ ಹಿನ್ನೆಲೆಯಿಂದ ಈ ಅಧ್ಯಯನದ ಅಗತ್ಯವಿದೆ.

ಮುಮ್ಮಡಿ ಕೃಷ್ಣರಾಜ ಒಡೆಯರ ಕೃಪಾಪೋಷಣೆಯಿಂದ ಬೆಳೆದು, ಚಾಮರಾಜ ಒಡೆಯರ ರಾಜಗುರುವಾದ ಬಸವಪ್ಪಶಾಸ್ತ್ರಿ ಸಂಸ್ಕೃತ ಮತ್ತು ಕನ್ನಡ ಭಾಷೆಗಳೆರಡರಲ್ಲೂ ಪ್ರಕಾಂಡ ಪಾಂಡಿತ್ಯ ಗಳಿಸಿದವರು. ಇವರು ಕವಿಯಾಗಿ, ಶ್ರೇಷ್ಠ ಅನುವಾದಕರಾಗಿ, ನೀತಿಜ್ಞರಾಗಿ, ಕನ್ನಡ ಸಾಹಿತ್ಯ ಲೋಕವನ್ನು ಬೆಳಗಿದವರು. ಇವರ ಜೀವನ ಮತ್ತು ಸಾಹಿತ್ಯ ಅಧ್ಯಯನವು ಉತ್ತಮ ಬದುಕಿಗೆ ಸ್ಫೂರ್ತಿಯಾಗುವುದು. ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ಪರಿಚಯಿಸುವ ಸಾಹಿತ್ಯ ಚರಿತ್ರೆಗಳು ಸಾಕಷ್ಟು ಬಂದಿವೆ. ಅವುಗಳಲ್ಲಿ ಬಸವಪ್ಪಶಾಸ್ತ್ರಿಗಳ ಕೃತಿಗಳನ್ನು ಹೆಸರಿಸಲಾಗಿದೆ. ಎಂ.ಜಿ. ನಂಜುಂಡಾರಾಧ್ಯ, ಬಿ. ಶಿವಮೂರ್ತಿಶಾಸ್ತ್ರಿ, ಡಾ. ಸಿ. ಎಸ್ ಶಿವಕುಮಾರಸ್ವಾಮಿ ಅವರು ಬಸವಪ್ಪಶಾಸ್ತ್ರಿಗಳ ಜೀವನ ಮತ್ತು ಕೃತಿಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಿಕೊಟ್ಟಿದ್ದಾರೆ. ಬಸವಪ್ಪಶಾಸ್ತ್ರಿಗಳನ್ನು ಕುರಿತಂತೆ ಡಾ.ಹಂಪನಾಗರಾಜಯ್ಯ, ಡಾ. ಪಿ.ಕೆ. ರಾಜಶೇಖರ ಅವರು ಮಕ್ಕಳಿಗಾಗಿ ಪುಸ್ತಿಕೆಗಳನ್ನು ಬರೆದಿದ್ದಾರೆ. ಆದ್ದರಿಂದ ಬಸವಪ್ಪ ಶಾಸ್ತ್ರಿಗಳ ಸಮಗ್ರ ಅಧ್ಯಯನದ ಅಗತ್ಯತೆಯನ್ನು ಮನಗಂಡು ಈ ಸಂಶೋಧನೆಯನ್ನು ಕೈಗೊಳ್ಳಲಾಗಿದೆ. ರಂ.ಶ್ರೀ.ಮುಗಳಿ, ತ.ಸು. ಶಾಮರಾವ್, ಕೀರ್ತಿನಾಥ ಕುರ್ತುಕೋಟಿ, ಡಾ. ಶ್ರೀನಿವಾಸ ಹಾವನೂರ, ಎಲ್. ಎಸ್. ಶೇಷಗಿರಿರಾವ್, ಡಾ. ಹರಿಕೃಷ್ಣಭರಣ್ಯ, ಡಾ. ಕೆ. ಮರುಳಸಿದ್ದಪ್ಪ, ಮೊದಲಾದ ವಿದ್ವಾಂಸರು ತಮ್ಮ ಕೃತಿಗಳಲ್ಲಿ ಪ್ರಾಸಂಗಿಕವಾಗಿ ಬಸವಪ್ಪಶಾಸ್ತ್ರಿಗಳ ಬಗ್ಗೆ ಪ್ರಸ್ತಾಪಿಸಿದ್ದಾರೆಯೇ ಹೊರತು ವಿವರವಾಗಿ ಚರ್ಚಿಸಿಲ್ಲ. ಹೀಗಾಗಿ ಈ ಅಧ್ಯಯನದಲ್ಲಿ ಆ ಕೊರತೆಗಳನ್ನು ತುಂಬಿಕೊಡುವ ಪ್ರಯತ್ನವನ್ನು ಮಾಡಲಾಗಿದೆ..

ಬಸವಪ್ಪಶಾಸ್ತ್ರಿಗಳು ಇಪ್ಪತ್ತೆಂಟು ಕೃತಿಗಳನ್ನು ರಚಿಸಿರುವರು. ಅವುಗಳಲ್ಲಿ ಕೆಲವು ಉಪಲಬ್ದವಿಲ್ಲ. ಲಭ್ಯವಿರುವ ಕೃತಿಗಳ ಜೊತೆಗೆ ಶಾಸ್ತ್ರಿಗಳ ಜೀವನದ ಬಗ್ಗೆ ಅಧಿಕೃತ ಮಾಹಿತಿಗಳನ್ನು ಸಂಗ್ರಹಿಸಿ; ಅವರ ಮನೆತನದ ಪೂರ್ವವೃತ್ತಾಂತ, ಬಾಲ್ಯ ಜೀವನ, ವಿದ್ಯಾಭ್ಯಾಸ, ಅವರಿಗೆ ಎದುರಾದ ಸಮಸ್ಯೆಗಳು, ಅವುಗಳನ್ನು ಪರಿಹರಿಸಿಕೊಂಡು, ಮಾಡಿದ ಸಾಧನೆಗಳನ್ನು ಇಲ್ಲಿ ನಿರೂಪಿಸಲಾಗಿದೆ. ಬಸವಪ್ಪ ಶಾಸ್ತ್ರಿಗಳು ಬದುಕಿದ್ದು ಕೇವಲ ನಲವತ್ತೆಂಟು ವರ್ಷಗಳು ಮಾತ್ರ.

ಆದರೆ ಅವರ ಸಾಧನೆ ತುಂಬಾ ದೊಡ್ಡದು. ಅವರ ಶ್ರೇಷ್ಠ ಅನುವಾದಪಾಂಡಿತ್ಯ, ಅಪಾರಕೀರ್ತಿಗೆ ಕಾರಣವಾಯಿತು. ಅನುವಾದ ಕಲೆ ಒಂದು ರೀತಿಯಲ್ಲಿ ಮೂಲಕೃತಿಯ ಪರಕಾಯ ಪ್ರವೇಶವಿದ್ದಂತೆ ಅಂಥ ಒಂದು ಸಾಹಸದಲ್ಲಿ ತೊಡಗಿದ ಬಸವಪ್ಪಶಾಸ್ತ್ರಿಗಳ ಅನುವಾದದ ಹಿರಿಮೆಯನ್ನು ಇಲ್ಲಿ ಗುರುತಿಸಲಾಗಿದೆ. ಆ ನಿಟ್ಟಿನಲ್ಲಿ ಅವರು ಅನುವಾದಿಸಿರುವ ಗ್ರಂಥಗಳನ್ನು ಮೂಲದೊಂದಿಗೆ ಹೋಲಿಸಿ ನೋಡಿರುವ ಪ್ರಯತ್ನ ಇದಾಗಿದೆ. ಕಾಳಿದಾಸನ 'ಅಭಿಜ್ಞಾನ ಶಾಕುಂತಲ'ದ ಅನುವಾದಗಳ ತೌಲನಿಕ-ಅಧ್ಯಯನವೇ ಮಹಾಪ್ರಬಂಧಕ್ಕೆ ಆಗುವಷ್ಟು ವಿಷಯ ವಿಸ್ತಾರವನ್ನು ಹೊಂದಿರುವುದರಿಂದ ಇಲ್ಲಿ ತೌಲನಿಕ ಅಧ್ಯಯನಕ್ಕೆ ಹೆಚ್ಚು ಒತ್ತು ನೀಡದೆ, ಶಾಸ್ತ್ರಿಗಳ ಒಟ್ಟು ಕೃತಿಗಳ ಅಧ್ಯಯನವನ್ನು ಪ್ರಧಾನವಾಗಿ ಪರಿಗಣಿಸಲಾಗಿದೆ.

ಭಾರತೀಯ ಸಂಸ್ಕೃತಿಯ ಪ್ರತೀಕಗಳೆಂದರೆ ರಾಮಾಯಣ ಮತ್ತು ಮಹಾಭಾರತ. ನಮ್ಮ ಬಹುಪಾಲು ಕವಿಗಳು ಅಲ್ಲಿನ ವಸ್ತುವನ್ನು ತಗೆದುಕೊಂಡು ಅವರವರು ಕಂಡುಕೊಂಡ ದರ್ಶನದದಿಯಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಶಾಸ್ತ್ರಿಗಳ ಕೃತಿಗಳು ಕೂಡ ಈ ನೆಲೆಯಲ್ಲಿಯೇ ರಚನೆಗೊಂಡಿವೆ. ಅವುಗಳಿಂದ ದೊರೆಯಬಹುದಾದ ದರ್ಶನವೇನೆಂಬಂದರ ಪರಿಶೀಲನೆಯನ್ನು ಈ ಮಹಾಪ್ರಬಂಧದಲ್ಲಿ ಮಾಡಲಾಗಿದೆ.

ಶ್ರೇಷ್ಠ ಗಮಕಿಗಳೂ, ನೀತಿಜ್ಞರೂ ಆದ ಬಸವಪ್ಪಶಾಸ್ತ್ರಿಗಳ ಜೀವನ ತತ್ವಗಳೇನು? ಇಹದ ಬದುಕಿಗೆ ಅವರ ಸಂದೇಶಗಳೇನು? ಭಕ್ತಿಯು ಮುಕ್ತಿಯ ಪಥವೇ? ಆಧ್ಯಾತ್ಮವು ಆತ್ಮವನ್ನು ವಿಕಾಸಗೊಳಿಸಿ, ಸಾರ್ಥಕ ಬದುಕಿಗೆ ಪ್ರೇರಕವಾಗುವುದೇ? ಪುರುಷಾರ್ಥಗಳನ್ನು ಸಾಧಿಸುವ ಬಗೆ ಹೇಗೆ? ಎಂಬಿತ್ಯಾದಿ ಸಂಗತಿಗಳನ್ನು ಈ ಸಂಶೋಧನೆಯ ಸಂದರ್ಭದಲ್ಲಿ ವಿಶದಪಡಿಸಲಾಗಿದೆ. ಒಟ್ಟಾರೆ ಈ ಮಹಾಪ್ರಬಂಧ ಬಸವಪ್ಪಶಾಸ್ತ್ರಿಗಳ ಸಮಗ್ರ ಕೃತಿಗಳ ಅಧ್ಯಯನವಾಗಿದ್ದು, ಅವರ ಅನುವಾದ ಪ್ರತಿಭೆ ಮತ್ತು ಸ್ವತಂತ್ರ ಸೃಜನಶೀಲ ಪ್ರತಿಭೆಯನ್ನು ಗುರುತಿಸುವ ಪ್ರಯತ್ನವಾಗಿದೆ.